## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 160/23

**ಸಾಕ್ಷಿಯನ್ನು ದಿಃ 24.06.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ರಾಜೇಶ್ | ಸಿ.ಡಬ್ಲ್ಯೂಃ **2** | ಪಿ.ಡಬ್ಲ್ಯೂಃ **4** |
| ತಂದೆಯ ಹೆಸರು | ನಾಗರಾಜು | | |
| ವಯಸ್ಸು | **29** ವರ್ಷ | | |
| ಕೆಲಸ | ಬಾರಿನಲ್ಲಿ ಕೆಲಸ | | |
| ವಾಸಸ್ಥಳ | ಪಿರಿಯಾಪಟ್ಟಣ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ಚಾಸಾ-1 ಹಾಗೂ 3 ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಪರಿಚಯ ಇಲ್ಲ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು.

2. ದಿಃ 19.09.2022 ರಂದು ರೇಣುಕಾ ಬಾರ್ ಗೆ ಕಳ್ಳತನಕ್ಕೆ ಸಂಬಂಧಪಟ್ಟಂತೆ ಪೊಲೀಸರು ಮಹಜರ್ ಮಾಡಲು ಬಂದಿದ್ದು ನಮ್ಮನ್ನು ಪಂಚರಾಗಿ ಬರಲು ಪೊಲೀಸರು ಕೋರಿದ ಮೇರೆಗೆ, ನಾವು ಒಪ್ಪಿ ಹಾಜರಿದ್ದು, ಪೊಲೀಸರು ಬೆಳಿಗ್ಗೆ 10.15-11.00 ಗಂಟೆವರೆಗೆ ಸದರಿ ಮಹಜರ್ ಮಾಡಿದ್ದು, ಆ ಸಮಯ ನಾನು ಹಾಗೂ ಚಾಸಾ-1,3 ರವರು, ಪೊಲೀಸರು ಹಾಜರಿದ್ದೇವು. ಸದರಿ ಮಹಜರ್ ಗೆ ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆಯಲ್ಲಿರುವ ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಆ ಸಮಯ ಪೊಲೀಸರು ಎರಡು ಭಾವಚಿತ್ರಗಳನ್ನು ತೆಗೆದಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಎನ್ ಪಿ ಅವರಿಂದ-**

3. ನಾನು ಪಿರಿಯಾಪಟ್ಟಣದಲ್ಲಿ ವಾಸವಾಗಿದ್ದೇನೆ. ನಾನು ಬಾರಿನಲ್ಲಿ ಕೆಲಸ ಮಾಡುತ್ತೇನೆ. ಈ ಪ್ರಕರಣದ ಸಂಬಂಧ ನಿಪಿ.2 ರ ಮಹಜರ್ ಗಾಗಿ ನನಗೆ ಪೊಲೀಸರು ಯಾವುದೇ ನೋಟೀಸ್ ನೀಡಿರಲಿಲ್ಲ. ಈ ಘಟನೆಗೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ಪೊಲೀಸರು ಠಾಣೆಗೆ ಕರೆದಿರಲಿಲ್ಲ. ನಿಪಿ.2 ರ ಮಹಜರ್ ಅನ್ನು ಯಾವ ಪೊಲೀಸರು ಬರೆದ್ದಿದಾರೆ ನನಗೆ ಗೊತ್ತಿಲ್ಲ. ನಿಪಿ.2 ರಲ್ಲಿ ನಮೂದು ಮಾಡಿರುವ ಚೆಕ್ಕುಬಂದಿ ಪೈಕಿ ಪಶ್ಚಿಮ ದಿಕ್ಕಿನಲ್ಲಿ ಏನಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ಪ್ರಸ್ತುತ ಪ್ರಕರಣದ ಸಂಖ್ಯೆ ಹಾಗೂ ಯಾವ ವಿಚಾರಕ್ಕೆ ಸಾಕ್ಷಿ ನುಡಿಯಲು ಬಂದಿದ್ದೇನೆ ನನಗೆ ಗೊತ್ತಿಲ್ಲ. ನಾನು ಬಾರಿನಲ್ಲಿ ಕೆಲಸ ಮಾಡುತ್ತಿರುವ ಕಾರಣ ನಿಪಿ.2 ಕ್ಕೆ ನಾನು ಪೊಲೀಸರ ಹೇಳಿಕೆ ಹಾಗೂ ಚಾಸಾ–1 ರವರ ಹೇಳಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

4. ನಾನು ಹುಣಸೂರಿನಿಂದ 10.30 ಕ್ಕೆ ಬಾರ್ ಕೆಲಸ ಮುಗಿಸಿ ಸುಮಾರು 11.00 ಗಂಟೆಗೆ ಪಿರಿಯಾಪಟ್ಟಣಕ್ಕೆ ಹೋಗುತ್ತೀನಿ. ಮತ್ತೆ ಬೆಳಿಗೆಗ ಸುಮಾರು 9.30 ಕ್ಕೆ ಹುಣಸೂರಿಗೆ ಕೆಲಸಕ್ಕೆ ಬರುತ್ತೀನಿ. ಈ ಪ್ರಕರಣದ ಸಂಬಂಧ ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಪೊಲೀಸರ ಹೇಳಿಕೆ ಮೇರೆಗೆ ನಾನು ಈ ದಿನ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ. ಎಂ. ಎಫ್. ಸಿ. , ಹುಣಸೂರು.